# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 606 |
| ಸದಸ್ಯರ ಹೆಸರು | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10.03.2020 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ.</td><td>ಬೀದರ್ ಜಿಲ್ಲೆಯಲ್ಲಿ ನಿರಂತರ ಮರಳು–ಅಕ್ರಮ ಸಾಗಾಣಿಕೆ ಯಾಗುತ್ತಿದೆಯೆಂಬ ಗಂಭೀರ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು: (ಸಂಪೂರ್ಣ ವಿವರವಾದ ಮಾಹಿತಿ ನೀಡುವುದು)</td><td>ಬೀದರ ಜಿಲ್ಲೆಯ ಮಾಂಜ್ರಾ ನದಿ ಪಾತ್ರದಲ್ಲಿನ ಮರಳು ಕಟ್ಟಡ ಕಾಮಗಾರಿಗಳ ನಿರ್ಮಾಣಕ್ಕೆ ಯೋಗ್ಯವಿರುವುದಿಲ್ಲವೆಂದು ಕಾರ್ಯಪಾಲಕ ಅಭಿಯಂತರರು, ಗುಣನಿಯಂತ್ರಣ ವಿಭಾಗ, ಕಲಬುರ್ಗಿ ರವರು ವರದಿ ನೀಡಿರುವುದರಿಂದ ಸದರಿ ನದಿ ಪಾತ್ರದಲ್ಲಿ ಮರಳು ಬ್ಲಾಕ್‌ಗಳನ್ನು ಗುರುತಿಸಿರುವುದಿಲ್ಲ.<br>ಸ್ಥಳೀಯರು ಸದರಿ ನದಿ ಪಾತ್ರದ ವ್ಯಾಪ್ತಿಯಲ್ಲಿ ಆಗಿಂದಾಗ್ಗೆ ಅನಧಿಕೃತವಾಗಿ ಮರಳು ಗಣಿಗಾರಿಕೆ ನಡೆಸಿ, ಮನೆ ನಿರ್ಮಾಣಗಳ ಬುನಾದಿ ಕಾಮಗಾರಿಗಳಿಗೆ ಉಪಯೋಗಿಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಅನಧಿಕೃತ ಮರಳು ಗಣಿಗಾರಿಕೆ ಹಾಗೂ ಸಾಗಾಣಿಕೆಯು ಕಂಡುಬಂದ ಸಮಯದಲ್ಲಿ ಜಿಲ್ಲಾ ಮರಳು ಸಮಿತಿಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. 2019–20 ನೇ ಸಾಲಿನ ಜನವರಿ ಅಂತ್ಯದವರೆಗೆ ಬೀದರ್ ಜಿಲ್ಲಾ ಮರಳು ಸಮಿತಿಯಿಂದ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಲ್ಲಿ ಕೈಗೊಂಡ ಕ್ರಮಗಳು ಈ ಕೆಳಕಂಡಂತಿರುತ್ತವೆ.<br>
<table>
<tr><th>ಪ್ರಕರಣಗಳ ವಿವರಗಳು</th><th>ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿದ ದಂಡ (ರೂ. ಲಕ್ಷಗಳಲ್ಲಿ)</th><th>ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ</th></tr>
<tr><td>ಗಣಿಗಾರಿಕೆ</td><td>36</td><td>6.99</td><td>0</td></tr>
<tr><td>ಸಾಗಾಣಿಕೆ</td><td>38</td><td>8.6</td><td>18</td></tr>
<tr><td>ದಾಸ್ತಾನು</td><td>1</td><td>0.55</td><td>0</td></tr>
<tr><td>ಒಟ್ಟು</td><td>75</td><td>16.14</td><td>18</td></tr>
</table></td></tr>
<tr><td>ಆ.</td><td>ಬೀದರ್ ಜಿಲ್ಲೆಯಲ್ಲಿ ಮರಳು ಹರಾಜಿನಿಂದ ಕಳೆದ ಮೂರು ವರ್ಷಗಳಲ್ಲಿ ಬಂದ ಆದಾಯವೆಷ್ಟು:</td><td>ಬೀದರ್ ಜಿಲ್ಲೆ ಮಾಂಜ್ರಾ ನದಿ ಪಾತ್ರದಲ್ಲಿನ ಮರಳು ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸೂಕ್ತವಾಗಿಲ್ಲದ ಕಾರಣ ಸದರಿ ನದಿ ಪಾತ್ರದಲ್ಲಿ ಯಾವುದೇ ಮರಳು ಬ್ಲಾಕ್‌ಗಳನ್ನು ಗುರುತಿಸಿರುವುದಿಲ್ಲ ಹಾಗೂ ಹರಾಜು ಪ್ರಕ್ರಿಯೆ ಕೈಗೊಂಡಿರುವುದಿಲ್ಲ. ಈ ಕಾರಣದಿಂದಾಗಿ</td></tr>
</table>

| | | |
|---|---|---|
| | | ಬೀದರ್ ಜಿಲ್ಲೆಯಲ್ಲಿ ಮರಳು ಹರಾಜಿನಿಂದ ಯಾವುದೇ ಆದಾಯ ಬಂದಿರುವುದಿಲ್ಲ. |
| ಇ. | ಮಾಜರಾ ನದಿಯಿಂದ ಅಕ್ರಮವಾಗಿ ಮರಳು ಸಾಗಿಸುತ್ತಿರುವವರ ವಿರುದ್ಧ ಸರ್ಕಾರವು ತೆಗೆದುಕೊಂಡ ಕ್ರಮಗಳೇನು: (ಸ್ಪಷ್ಟ ಮಾಹಿತಿ ನೀಡುವುದು) | ಬೀದರ್ ಜಿಲ್ಲಾ ವ್ಯಾಪ್ತಿಯ ಮಾಂಜ್ರಾ ನದಿ ಪಾತ್ರದಲ್ಲಿ ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ನಿಯಂತ್ರಿಸಲು ಜಿಲ್ಲಾ ಮರಳು ಸಮಿತಿಯಿಂದ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿರುತ್ತದೆ. ಬೀದರ್ ಜಿಲ್ಲಾ ಮರಳು ಸಮಿತಿಯಿಂದ 2019-20 ನೇ ಸಾಲಿನ ಜನವರಿ ಅಂತ್ಯದವರೆಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆ ಹಾಗೂ ಮಾನ್ಯ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದ್ದು, ಮಾಹಿತಿ ಈ ಕೆಳಕಂಡಂತಿರುತ್ತದೆ; |

| ವರ್ಷ | ಪತ್ತೆಹಚ್ಚಿದ ಪ್ರಕರಣಗಳು | ವಸೂಲಾದ ದಂಡ (ರೂ. ಲಕ್ಷಗಳಲ್ಲಿ) | ದಾಖಲಿಸಿದ ಪ್ರಕರಣಗಳ ಸಂಖ್ಯೆ |
|---|---|---|---|
| 2019-20 | 38 | 8.60 | 18 |

| | | |
|---|---|---|
| ಈ. | ಈ ಕುರಿತು ಜಿಲ್ಲಾಯಾದ್ಯಂತ ದಾಖಲಾದ ಪ್ರಕರಣಗಳೆಷ್ಟು? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಬೀದರ ಜಿಲ್ಲಾ ಮರಳು ಸಮಿತಿಯಿಂದ, ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಯಡಿಯಲ್ಲಿ ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿರುತ್ತವೆ. |

| ಪ್ರಕರಣಗಳ ವಿವರಗಳು | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (ರೂ ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ |
|---|---|---|---|
| ಬೀದರ | 34 | 6.74 | 17 |
| ಬಸವಕಲ್ಯಾಣ | 4 | 0.80 | 0 |
| ಹುಮನಾಬಾದ | 0 | 0 | 01 |
| ಔರಾದ | 13 | 2.60 | 0 |
| ಭಾಲ್ಕಿ | 24 | 6.00 | 0 |
| | 75 | 16.14 | 18 |

ಸಂಖ್ಯೆ: ಸಿಐ 113 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು